

ಡಾ.ವಿನೋದ ಛೆಬ್ಬಿ

**ಯಾವುದೇ ಕಾಮಕೂಟವು ನಡೆಯುವುದರ – ಅಥವಾ ನಡೆಯದೆ ಇರುವುದರ – ಹಿಂದೆ ಎಷ್ಟೊಂದು ಅರ್ಥಗಳಿವೆ!**

# 176: ಮೌನಸಂವಾದ

ಲೈಂಗಿಕ ಸಮಸ್ಯೆ ಉಂಟಾದಾಗ ಮನಸ್ಥೈರ್ಯ ಬೆಳೆಸಿಕೊಳ್ಳಲು, ತನ್ಮೂಲಕ ಆತ್ಮವಿಕಾಸದ ಹಾದಿ ಹಿಡಿಯುವುದು ಹೇಗೆ ಎಂದು ಚರ್ಚಿಸುತ್ತಿದ್ದೇವೆ.

ಕಾಮಕೂಟಕ್ಕೂ ಆತ್ಮವಿಕಾಸಕ್ಕೂ ಎತ್ತಣ ಮಾಮರ ಎತ್ತಣ ಕೋಗಿಲೆ... ಎಂದು ನೀವು ವಿಸ್ಮಯಿಸಬಹುದು. ಇದು ಹೇಗೆಂದು ವಿವರಿಸುತ್ತೇನೆ. ಆತ್ಮವಿಕಾಸ ಎಂದರೆ ವ್ಯಕ್ತಿತ್ವ ವಿಕಾಸ. ಲೈಂಗಿಕತೆಯು ನಮ್ಮ ಸಮಗ್ರ ವ್ಯಕ್ತಿತ್ವದ ಒಂದು ಮುಖ್ಯ ಭಾಗವಷ್ಟೆ? ನಾವು ಲೈಂಗಿಕತೆಯಲ್ಲಿ ಬೆಳೆಯುವಾಗ ನಮ್ಮ ವ್ಯಕ್ತಿತ್ವವೂ ಬೆಳೆಯುತ್ತ ಆತ್ಮವಿಕಾಸ ಆಗುತ್ತದೆ (ಪುರಾಣಗಳಲ್ಲಿ ನಂಬಿಕೆ ಇರುವವರು ಶ್ರೀಕೃಷ್ಣನ ಆತ್ಮವಿಕಾಸವನ್ನು ನೆನಪಿಸಿಕೊಳ್ಳಿ). ಆತ್ಮವಿಕಾಸ ಹೊಂದಿದವರು ಕಾಮಕ್ರಿಯೆಯಲ್ಲಿ ವರ್ತಿಸುವ ರೀತಿಯು ಆತ್ಮವಿಕಾಸ ಆಗದವರಿಗಿಂತ ಭಿನ್ನವಾಗಿದೆ. ಇದನ್ನು ಮನವರಿಕೆ ಮಾಡಿಕೊಳ್ಳಲು ನಿಮ್ಮ ದಾಂಪತ್ಯವನ್ನೇ ದೃಷ್ಟಾಂತವಾಗಿ ಇಟ್ಟುಕೊಂಡು ಮುಂದಿನದನ್ನು ಓದಿ.

ನಿಮ್ಮಿಬ್ಬರ ನಡುವೆ ಪ್ರೀತಿ ಸಾಕಷ್ಟಿದೆ, ಹಾಗಿದ್ದರೂ ಮುಂಚೆ ಧಾರಾಳವಾಗಿದ್ದ ಕಾಮಕೂಟ ಸ್ವಲ್ಪ ಕಾಲದಿಂದ ನಡೆಯುತ್ತಿಲ್ಲ ಎಂದು ಕಲ್ಪಿಸಿಕೊಳ್ಳಿ. ಅದಕ್ಕೆ ನಿಮ್ಮಲ್ಲಿ ಶಾರೀರಿಕ ಕಾರಣಗಳಿಲ್ಲ, ಬದಲಾಗಿ ನಿಮ್ಮ ಸಂಗಾತಿಯ ವೈಯಕ್ತಿಕ ಸ್ಥಿತಿಗತಿಗಳೇ (ಉದಾ. ಅನಾರೋಗ್ಯ, ಕೆಲಸದ ಒತ್ತಡ) ಕಾರಣವಾಗಿವೆ ಎಂದಿಟ್ಟುಕೊಳ್ಳಿ. ಇಲ್ಲಿ ಸಂಗಾತಿಯ ವಿಷಮ ಸ್ಥಿತಿಯನ್ನು ನೀವು ಸುಲಭವಾಗಿ ಅರ್ಥ ಮಾಡಿಕೊಳ್ಳುತ್ತೀರಿ. ಛೆ, ಪಾಪ ಎಂದು ಮರುಕ ಪಡುತ್ತೀರಿ. ಹಾಗೆಂದು ಇದು ನಿಮಗೆ ನೆಮ್ಮದಿ ಕೊಡುವುದಿಲ್ಲ – ಯಾಕೆಂದರೆ ನಿಮಗೆ ಬೇಕಾದುದು ಸಿಗುತ್ತಿಲ್ಲವಲ್ಲ? ಹಾಗಾಗಿ ಕೂಟ ನಿಂತಿದ್ದಕ್ಕೆ ಸಕಾರಣ ಇದ್ದರೂ ಅಸಮಾಧಾನ, ನಿರಾಸೆ, ವ್ಯಗ್ರತೆ ಅನಿಸುವುದು ಖಂಡಿತ – ಅದನ್ನು ಸಂಗಾತಿಗೆ ತೋರಿಸಿಕೊಳ್ಳುತ್ತೀರೋ ಇಲ್ಲವೋ ಎನ್ನುವುದು ಬೇರೆ ಮಾತು. ಉದಾ. ಹೆಂಡತಿಯು ಹೆರಿಗೆಗೆ ತವರಿಗೆ ಹೋದಾಗ ಗಂಡನು ಮಗುವನ್ನು ನೋಡಲು ಒಮ್ಮೆ ಭೇಟಿಕೊಟ್ಟ ನಂತರ ಮೂರು ತಿಂಗಳು ಅಲ್ಲಿಗೆ ಕಾಲಿಟ್ಟಿಲ್ಲ. ಸಂದೇಶಗಳೂ ಅಷ್ಟಕ್ಕಷ್ಟೆ. ಕೇಳಿದರೆ ಬಿಡುವಿಲ್ಲ ಎಂಬ ಉತ್ತರ. ಇಲ್ಲಿ ಗಂಡನಿಗೆ ಹೆಂಡತಿ ಬೇಡವೆಂದಿಲ್ಲ. ಆದರೆ ಅವಳೊಡನೆ ತಾನು ಬಯಸಿದಂತೆ ಬೆರೆಯುವ ಹಾಗಿಲ್ಲವಲ್ಲ ಎನ್ನುವ ಅಸಮಾಧಾನ ಇದೆ. ಅಂದರೆ ಅವನ ಸಂಪರ್ಕ ಕಡಿತಕ್ಕೆ ವಿಶೇಷ ಅರ್ಥವಿದೆ!

ಕಾಮಕೂಟವು ನಡೆಯುವುದಕ್ಕೆ – ಹಾಗೂ ನಡೆಯದೆ ಇರುವುದಕ್ಕೆ – ಯಾವಾಗಲೂ ಅರ್ಥವಿರುತ್ತದೆ. ಪ್ರತಿ ಲೈಂಗಿಕ ವರ್ತನೆಗೂ – ಅಥವಾ ಅದನ್ನು ಮುಚ್ಚಿಡುವ ವರ್ತನೆಗೂ ಅರ್ಥವಿದೆ. ನಿಮ್ಮಲ್ಲಿ ಕಾಮಕೂಟವು ದೀರ್ಘಕಾಲ ಕಾಣೆಯಾದಾಗ ನಿಮ್ಮ ನಡುವೆ ಏನಾಗುತ್ತಿದೆ ಎಂದು ಗಮನಿಸಿದರೆ ಏನೇನೋ ಅರ್ಥ ಕಂಡುಕೊಳ್ಳುತ್ತೀರಿ. ಉದಾಹರಣೆಗೆ, ನಿಮಗೆ ಅಸಮಾಧಾನ ಆಗಿದೆ ಎಂದರೆ ಅದನ್ನು ನೇರವಾಗಿ ತೋರಿಸಿಕೊಳ್ಳಬೇಕೋ ಸುಮ್ಮನಿರಬೇಕೋ ಎಂದು ಯೋಚಿಸುವುದಕ್ಕೂ ಒಂದು ಅರ್ಥವಿದೆ. ತೋರಿಸಿಕೊಂಡರೆ ಒಂದರ್ಥ, ಸುಮ್ಮನಿದ್ದರೆ ಇನ್ನೊಂದು ಅರ್ಥವಿದೆ. ಇದನ್ನು ಸ್ಪಷ್ಟಪಡಿಸುವುದಕ್ಕಾಗಿ ಒಂದು ದೃಷ್ಟಾಂತ:

ಈ ದಂಪತಿಯಲ್ಲಿ ಗಂಡ ಇತ್ತೀಚೆಗೆ ಟಿವಿಯ ಮುಂದೆ ತಡರಾತ್ರಿಯ ತನಕ ಕೂತಿರುತ್ತಾನೆ. ಅವನು ಹಾಸಿಗೆಗೆ ಬರುವಷ್ಟರಲ್ಲಿ ಹೆಂಡತಿ ಮಲಗಿರುತ್ತಾಳೆ. ತಾನು ಮಲಗಿದ ನಂತರ ಗಂಡ ಬರುತ್ತಿರುವುದು ಆಕೆಗೆ ಒಂದರ್ಥ ಕೊಡುತ್ತದೆ. ಅದರಲ್ಲೂ ಅವನ ಟಿವಿ ಅಭ್ಯಾಸವು ಅವರ ಕಾಮಕೂಟವು ನಿಂತ ಮೇಲೆ ಶುರುವಾಗಿದ್ದು ನೆನಪಾಗಿ, ಆಕೆ ಇನ್ನೊಂದು ರೀತಿ ಅರ್ಥೈಸುತ್ತಾಳೆ – ಗಂಡ 'ನನಗೆ ಸಾಕಾಗಿದೆ' ಎನ್ನುತ್ತಿದ್ದಾನೆ! ಅದಕ್ಕೆ ಹೆಂಡತಿಯ ಪ್ರತಿಕ್ರಿಯೆ? ಅವಳು 'ನನಗೂ ಸಾಕಾಗಿದೆ' ಎನ್ನಲು ತಯಾರಾಗುತ್ತಾಳೆ. ಹೇಗೆ? ಬೆಳಿಗ್ಗೆ ಬೇಗ ಎದ್ದು ತಿರುಗಾಟಕ್ಕೆ ಹೊರಡುತ್ತಾಳೆ. ಇಷ್ಟು ದಿನ ಗಂಡ ಬಡಕೊಂಡರೂ ಕ್ಯಾರೆ ಅನ್ನದವಳು ಏಕಾಏಕಿ ಹೇಗೆ ಮನಸ್ಸು ಮಾಡಿದಳು? ಗಂಡನ ಕಾಮೋದ್ರೇಕವು ಬೆಳಗಿನ ಜಾವದಲ್ಲಿ ಚೆನ್ನಾಗಿರುತ್ತದೆ ಎಂಬುದು ಆಕೆಗೆ ಗೊತ್ತಿದೆ! ಅಷ್ಟೇ ಅಲ್ಲ, ಭಾನುವಾರ ಮಧ್ಯಾಹ್ನ ಗೆಳತಿಯರನ್ನು ಊಟಕ್ಕೆ ಆಹ್ವಾನಿಸಲು ಶುರುಮಾತ್ತಾಳೆ. ಯಾಕೆ? ಗಂಡ ಕೆಲವೊಮ್ಮೆ ಮಧ್ಯಾಹ್ನದ ವಿಶ್ರಾಂತಿಯ ಸಮಯದಲ್ಲಿ ಆಕೆಯ ಹತ್ತಿರ ಬರುವುದುಂಟು. ಈಗ ಗಂಡನು ಹೆಂಡತಿಯ ಬದಲು ವರ್ತನೆಯಲ್ಲಿ ಹೊಸ ಅರ್ಥ ಕಂಡುಕೊಳ್ಳುತ್ತಾನೆ. ಹೀಗೆ ಎರಡು ವಾರ ನಡೆದ ನಂತರ ಮೂರನೆಯ ಭಾನುವಾರ ಗಂಡ ತಿಂಡಿಯ ನಂತರ ಕ್ರಿಕೆಟ್ ಬ್ಯಾಟ್ ಹಿಡಿದು ಹೊರಡುತ್ತಾನೆ. ಮರಳುವುದು ಸಾಯಂಕಾಲ ಎನ್ನುತ್ತಾನೆ. ಇದಕ್ಕೆ ಹೆಂಡತಿ ಏನು ಅರ್ಥ ಹಚ್ಚಬೇಕೆಂದು ಅವನ ಅಪೇಕ್ಷೆ ಎಂದು ನೀವೇ ಊಹಿಸಿ!

ಹೀಗೆ ಸಂಗಾತಿಗಳ ನಡುವೆ ಅರ್ಥಭರಿತ 'ಕಾಮ ಸಂವಾದ'ಗಳು ಕಾಮಕೂಟದ ಗೈರುಹಾಜರಿಯಲ್ಲೂ ಸಮೃದ್ಧವಾಗಿ ನಡೆಯುತ್ತ ಇರುತ್ತವೆ. ಕಾಮಕ್ಕೆ ಸಂಬಂಧಿಸಿದ ಯಾವುದೇ ವರ್ತನೆಗೆ ಯಾವೊತ್ತಿಗೂ ಅರ್ಥವಿಲ್ಲ ಎಂದಿಲ್ಲ. ಕಾಮಸಂವಾದಕ್ಕೆ ಮಾತು ಬೇಕೆಂದೇನಿಲ್ಲ. ಮಾತಿಲ್ಲದೆ ಬೆನ್ನು ತಿರುಗಿಸಿ ಮಲಗಿರುವ ಸಂಗಾತಿಗಳನ್ನು ತೆಗೆದುಕೊಳ್ಳಿ. ಇಬ್ಬರೂ ಶ್ರೀಮಂತ ಸಂವಾದದಲ್ಲಿ ಮಾತಿಲ್ಲದೆ ತೊಡಗಿರುತ್ತಾರೆ. ಅವರ ನಡುವಿನ ಮೌನದ ಅಬ್ಬರ ಕಿವಿ ಗಡಚಿಕ್ಕುವಂತೆ ಇರುತ್ತದೆ. ದುರದೃಷ್ಟ ಏನೆಂದರೆ, ಈ ಮೌನ ಸಂವಾದಕ್ಕೆ ಕೊನೆಯೆಂಬುದಿಲ್ಲ. ಅಷ್ಟಲ್ಲದೆ ಕಿರಿಕಿರಿ ಎನ್ನಿಸುವ ಕಾಮಕೂಟಕ್ಕೂ ವಿಶಿಷ್ಟ ಅರ್ಥವಿದೆ. ಕೂಟ ಎಂಥದ್ದೇ ಆದರೂ ತಮ್ಮದೇ ಆದ ಅರ್ಥವನ್ನು ಕಂಡುಕೊಳ್ಳಲು ಪ್ರತಿಯೊಬ್ಬರಿಗೂ ಅವಕಾಶವಿದೆ. ಏನು ಕಂಡುಕೊಳ್ಳುತ್ತಾರೆ ಎನ್ನುವುದು ಅವರವರ ವ್ಯಕ್ತಿತ್ವ ವಿಕಾಸದ ಮಟ್ಟವನ್ನು ಅವಲಂಬಿಸಿದೆ ಎಂದು ಡೇವಿಡ್ ಸ್ನಾರ್ಷ್ ಹೇಳುತ್ತಾನೆ.

ವಿಚಿತ್ರವೇನೆಂದರೆ, ತೃಪ್ತಿಕರ ಎನ್ನಿಸಿಕೊಳ್ಳುವ ಕಾಮಕೂಟದಲ್ಲೂ ನೈಜ ಭಾವನೆಗಳನ್ನು ಮುಚ್ಚಿಡಲು ಸಾಧ್ಯವಿದೆ. ಉದಾಹರಣೆಗೆ, ಲವ ಲೇಖಾರ (ಕಂತು 162 ನೋಡಿ) ಕೂಟದ ಮಾದರಿಯನ್ನೇ ತೆಗೆದುಕೊಳ್ಳಿ. 'ನನಗೆ ಸಾಕಾಗಿದೆ' ಎನ್ನುವ ಮೌನ ಸಂವಾದ ಮೊದಲಿಂದ ಕಡೆತನಕ ಎದ್ದುಕಾಣುತ್ತದೆ. ಅವರು ತಮ್ಮ ಭಾವನೆಗಳನ್ನು ಮುಚ್ಚಿಟ್ಟುಕೊಳ್ಳಲು ಕೂಟ ಬೇಡವೆನ್ನುವಂತೆ ಕೂಟ ನಡೆಯುವಾಗಲೂ ಭಾವನೆಗಳನ್ನು ಬಚ್ಚಿಡುವುದನ್ನು ಕಲಿತಿದ್ದಾರೆ. ಲವ ಸಂಭೋಗದ ಪೂರ್ವದಲ್ಲಿ ಲೇಖಾಗೆ ತಯಾರಾಗಲು ಮುನ್ಸೂಚನೆ ಎನ್ನುವಂತೆ ಕೆಲವು 'ಮೇಲುಮುತ್ತು'ಗಳನ್ನು ಕೊಡುತ್ತಾನೆ. ಆಕೆಯ ಮನ ಮುಟ್ಟದೆ ಸ್ತನ ಮುಟ್ಟುತ್ತಾನೆ. ಸ್ಪರ್ಶದಲ್ಲಿ ಬಿಸುಪು ತರಲಿಕ್ಕಾಗದೆ 'ನನಗೆ ಸಾಕಾಗಿದೆ' ಎಂದು ಬಿಂಬಿಸುತ್ತಾನೆ. ಲೇಖಾ ಅದನ್ನು ಅರ್ಥೈಸಿಕೊಳ್ಳುತ್ತ, 'ನನಗೂ ಸಾಕಾಗಿದೆ' ಎನ್ನುವಂತೆ ಮುನ್ನಲಿವಿನ ಬಯಕೆಯನ್ನು ಬದಿಗಿಟ್ಟು ತೊಡೆಗಳನ್ನು ಅಗಲಿಸಿ ಅವನನ್ನು ಒಳಗೆ ಇರಿಸಿಕೊಳ್ಳುತ್ತಾಳೆ. ಸ್ವಲ್ಪ ಘರ್ಷಣೆಯ ನಂತರ ಲವ ಸಾಕಾಗಿ ಸಪ್ಪಗಾಗುತ್ತಾನೆ. ನಂತರ ಆಕೆಯ ಭಗಾಂಕುರವನ್ನು ತೀಡುತ್ತ ಅವಳನ್ನು ಸಾಕುಮಾಡುತ್ತಾನೆ. ಇಬ್ಬರಿಗೂ ಸಾಕಾದ ನಂತರ ಒಂದು ಚಿಕ್ಕ ಮುತ್ತಿನೊಡನೆ ಅವರ ಕಾಮಸಂವಾದ ಮುಗಿಯುತ್ತದೆ. ಹೀಗೆ ಇಬ್ಬರೂ ತಮ್ಮ ತಮ್ಮ ಭಾವನೆಗಳನ್ನು ಮರೆಮಾಚಿ ಕೂಟದಲ್ಲಿ ಪಾಲುಗೊಳ್ಳುತ್ತಾರೆ – ಒಂದು ವೇಳೆ ಇಂಥ ಕೂಟ ಬೇಡ, ಬದಲಾಗಿ ಕೂತುಕೊಂಡು ಏನು ನಡೆಯುತ್ತಿದೆ ಎಂದು ದಿಟ್ಟತನದಿಂದ ಚರ್ಚಿಸೋಣ ಎಂದರೆ ಪ್ರಾಮಾಣಿಕ ಭಾವನೆಗಳು ಹೊರಬರುತ್ತವೆ. ಅದು ಇಬ್ಬರಿಗೂ ಹಿಂಸೆ. ಹಾಗಾಗಿ ಇಬ್ಬರೂ ಒಂದು ರೀತಿಯ ಆತ್ಮವಂಚನೆ ಮಾಡಿಕೊಳ್ಳುತ್ತಾರೆ. ಇದೇ ಆತ್ಮವಂಚನೆಯನ್ನು ಕೂಟದಲ್ಲೂ ನಿತ್ಯದ ವ್ಯವಹಾರದಲ್ಲೂ ತೋರಿಸುತ್ತ ಇರುತ್ತಾರೆ.

ಈಗ ಹೇಳಿ: ಆತ್ಮ ವಂಚನೆ ಮಾಡಿಕೊಳ್ಳುತ್ತಿದ್ದರೆ ಆತ್ಮವಿಕಾಸ ಎಲ್ಲಾಗುತ್ತದೆ?

ಉಚಿತ ಸಹಾಯವಾಣಿಗೆ ಸಂಪರ್ಕಿಸಿ 8494944888